# 11

# ಪ್ರಾರ್ಥನೆಯು ... ಆಗಿರುವದಿಲ್ಲ

ಪ್ರಾರ್ಥನೆಯು ದೇವರು, ನಂಬಿಕೆ ಮತ್ತು ಜೀವನದ ನಮ್ಮ ಪೂರ್ಣತತ್ವವನ್ನು ಒಳಗೊಂಡಿರುವದರಿಂದ, ಅದನ್ನು ಒಂದು ಒಂದು ತಂತ್ರಕ್ಕೆ ಇಲ್ಲವೇ ಸೂತ್ರಕ್ಕೆ ಇಳಿಸಬಾರದು. ಈ ಪಾಠಗಳಲ್ಲಿ ಉತ್ತರಗಳಿಗಿಂತ ಹೆಚ್ಚು ಪ್ರಶ್ನೆಗಳಿರುತ್ತವೆ. ಅವು ಆಳವನ್ನು ಪ್ರಬೋಧಿಸುತ್ತವೆ, ಆದರೆ ಭಾವಾತಿರೇಖವನ್ನು ಅಲ್ಲ. ಅವುಗಳಿಗೆ ಭಾವನೆಗಿಂತ ಹೆಚ್ಚಾಗಿ ವಿಚಾರವು ಅಗತ್ಯವಾಗಿರುತ್ತದೆ. ಬಹುಶಃ ಪ್ರಾರ್ಥನೆಯ ಬಗೆಗಿನ ಸತ್ಯವು, ಪ್ರಾರ್ಥನೆಯು ಏನಾಗಿರುತ್ತದೆ ಎಂಬುದಕ್ಕಿಂತ ಹೆಚ್ಚಾಗಿ ಪ್ರಾರ್ಥನೆಯು ಏನಾಗಿರುವದಿಲ್ಲ ಎಂಬುದರಲ್ಲಿ ಹೆಚ್ಚು ಉತ್ತಮವಾಗಿ ಅರ್ಥಮಾಡಿಕೊಳ್ಳ*ಬಹುದು.* ಪ್ರಾರ್ಥನೆಯು ಏನಾಗಿರುವದಿಲ್ಲ ಎಂಬುದನ್ನು ನಾವು ಅನುದಿನವೂ ಜ್ಞಾಪಿಸಿಕೊಳ್ಳತಕ್ಕದ್ದು, ಇಲ್ಲದಿದ್ದರೆ ನಾವು - ಕೆಲವು ಸಲ - ಪ್ರಾರ್ಥನೆಯನ್ನು ಹುರುಳಿಲ್ಲದ್ದನ್ನಾಗಿ ಮಾಡುತ್ತೇವೆ.

*ಕೊನೆಯ ಅಸ್ತ್ರದಂತೆ ಉಪಯೋಗಿಸಲು,* ಪ್ರಾರ್ಥನೆಯು ತುರ್ತುಪರಿಸ್ಥಿತಿಗಳಿಗಾಗಿ ಮಾತ್ರವೇ ಇರುವದಿಲ್ಲ. ಒಬ್ಬ "ಕೊನೆಯ ಅಸ್ತ್ರದ ದೇವರು" ದೇವರಾಗಿರಲಾರನು! ಸಾಹಸಕಾರ್ಯದ ವೈಮಾನಿಕರು ಬುದ್ಧಿವಂತಿಕೆಯಿಂದ ಕೊಡೆವಿಮಾನಗಳನ್ನು ಧರಿಸುವರು, ಆದಾಗ್ಯೂ ಅವರು ಅವುಗಳನ್ನು ಉಪಯೋಗಿಸಲು ಬಯಸುವದಿಲ್ಲ! ಕೊಡೆವಿಮಾನವು ಕೊನೆಯ ಅಸ್ತ್ರವಾಗಿ ಉಪಯೋಗಿಸಲ್ಪಡುತ್ತದೆ. ಪ್ರಾರ್ಥನೆಯು ನಮ್ಮ ಕೊನೆಯ ವಿಚಾರವಾಗಿರಬಾರದು ಆದರೆ ಮೊದಲನೆಯ ವಿಚಾರವಾಗಿರತಕ್ಕದ್ದು. ನಮ್ಮ ಪ್ರಾರ್ಥನೆಯು ಅವಘಡಕ್ಕೆ ನಿಷ್ಕ್ರೀಯ ಪ್ರತಿಕ್ರಿಯೆಗಿಂತ ಹೆಚ್ಚಿನದಾಗಿರಬೇಕು. ನೀವು ಬಿನ್ನವಿಸುವ ದೇವರ ಹಿಂದೆ ಒಂದು ವಿಗ್ರಹವು ಅವಿತು ಕೊಂಡಿರುವುದೋ? ಪ್ರಾರ್ಥನೆಯು "ಸರಿಯಾದ ಸಂಗತಿ"ಗಾಗಿ "ಸರಿಯಾದ ದೇವರನ್ನು" ಬೇಡಿಕೊಳ್ಳು ವುದಾಗಿದೆ. ಉತ್ತರಿಸಲ್ಪಟ್ಟ ಪ್ರಾರ್ಥನೆಯ ಅತಿ ದೊಡ್ಡ ಆಶೀರ್ವಾದವು ನೀವು ಬಯಸಿದ್ದನ್ನು ಪಡೆದುಕೊಳ್ಳುವುದಿಲ್ಲ, ಆದರೆ ದೇವರು ಕೃತ್ಯದಲ್ಲಿ ಇರುವದನ್ನು ನೋಡುವುದಾಗಿದೆ. ಚೆನ್ನಾಗಿ ಪ್ರಾರ್ಥಿಸಲು ನಾವು ದೇವರನ್ನು ಚೆನ್ನಾಗಿ ತಿಳಿಯುವದಿಲ್ಲ ... ದೇವರನ್ನು ಚೆನ್ನಾಗಿ ತಿಳಿಯಲು ಚೆನ್ನಾಗಿ ಪ್ರಾರ್ಥಿಸಲು ಹೋರಾಡುತ್ತೇವೆ! ಜೀವಿ ಸುವುದು ಪ್ರಾರ್ಥಿಸುವುದಾಗಿದೆ. ನೀವು ಪ್ರಾರ್ಥಿಸುವದರಿಂದ ಪ್ರಾರ್ಥಿಸುವದನ್ನು ಕಲಿತುಕೊಳ್ಳುವಿರಿ. ಆದುದರಿಂದ ಪ್ರಾರ್ಥನೆಯು ಅದರವಾಗಿದೆ - ಕಲೆಯಾಗಿರುವದಿಲ್ಲ. ಯಾರೂ "ಪ್ರಾರ್ಥನೆಯಲ್ಲಿ ಒಳ್ಳೆಯದನ್ನು" ಪಡೆದುಕೊಳ್ಳುವದಿಲ್ಲ. ವಿರೋಧಾಭಾಸ ವಾಗಿ, ಒಬ್ಬನು ಹೆಚ್ಚು ಪ್ರಾರ್ಥಿಸುವಾಗ, ಅವನು ತನ್ನ ಪ್ರಾರ್ಥನೆಯೊಂದಿಗೆ ಕಡಿಮೆ ತೃಪ್ತಿಹೊಂದುತ್ತಾನೆ. ನಿಜವಾದ ಪ್ರಾರ್ಥನೆಯು ದೀನನನ್ನಾಗಿ ಮಾಡುತ್ತದೆ - ಅವನು ಆತ್ಮಿಕವಾಗಿ ಇತರರಿಗಿಂತ ಹೆಚ್ಚು ಉತ್ತಮನಾಗಿದ್ದಾನೆ ಎಂದು ಯೋಚಿಸುವಂತೆ ಮಾಡುವದಿಲ್ಲ. ಒಬ್ಬನು ಪ್ರಾರ್ಥನೆಯ ಮೇಲೆ ಪುಸ್ತಕವನ್ನು ಬರೆಯುವುದರಿಂದ ಅವನು ಹೇಗೆ ಪ್ರಾರ್ಥಿಸಬೇಕು ಎಂಬುದನ್ನು ತಿಳಿದಿರುವನು ಎಂದರ್ಥವಾಗುವದಿಲ್ಲ. ನಾನು ಬರೆದ ಎಲ್ಲಾ ಅಧ್ಯಯನಗಳಿಗಿಂತ ಇದು ಅತಿ ಹೆಚ್ಚು ಕಠಿಣವಾದದ್ದಾಗಿದೆ.

*ಪ್ರಾರ್ಥನೆಯು ಒಮ್ಮತಕ್ಕಾಗಿ ವಿಚಾರ ವಿನಿಮಯವಾಗಿರುವದಿಲ್ಲ.* ಸಹಾಯಹೀನ ಜನರಿಗೆ ದೇವರೊಂದಿಗೆ ವ್ಯವಹರಿಸಲು ನೆಲೆ ಇರುವದಿಲ್ಲ. ದೇವರೊಂದಿಗೆ ನೀವು "ಕುದುರೆ - ವ್ಯಾಪಾರ" ಮಾಡಲಾರಿರಿ. "ನಾನು ಹೆಚ್ಚಾದದ್ದನ್ನು ಎಂದೂ ಕೇಳುವದಿಲ್ಲ"

ಎಂದು ಒಬ್ಬ ಮನುಷ್ಯನು ಪ್ರಾರ್ಥನೆಯಲ್ಲಿ ದೇವರಿಗೆ ಹೇಳಿದನು! ಇದು ಪ್ರಾರ್ಥನೆಯ ಬಗ್ಗೆ ಸಂಪೂರ್ಣ ತಪ್ಪು ತಿಳುವಳಿಕೆಯಾಗಿದೆ. ದೇವರು ಕೊಡಲು, ನಮ್ಮನ್ನು ಆಶೀರ್ವದಿಸಲು ಬಯಸುತ್ತಾನೆ. ನಮ್ಮ ಅನುದಿನದ ಜೀವನದಲ್ಲಿ ಇರಲು ಆತನು ಬಯಸುತ್ತಾನೆ. ಆತನು ಹಟಮಾರಿಯಾಗಿರುವದಿಲ್ಲ. ಇತರರು, ತುರ್ತುಪರಿಸ್ಥಿತಿಯಲ್ಲಿ, "ನೀನು ಅದನ್ನು ಮಾಡಿದರೆ ನಾನು ಇದನ್ನು ಮಾಡುತ್ತೇನೆ" ಎಂದು ದೇವರಿಗೆ ವಾಗ್ದಾನ ಮಾಡುತ್ತಾರೆ. ಸೆರಮನೆಗಳಲ್ಲಿ, ಆಸ್ಪತ್ರೆಗಳಲ್ಲಿ, ಮತ್ತು ಸಮಾಧಿಗಳಲ್ಲಿ ಮಾಡಿದ ವಾಗ್ದಾನ ಗಳು ನೆರವೇರುವದಿಲ್ಲ. ನಾವು ಇನ್ನೊಂದು ಮರಣಾಂತಿಕ ತಪ್ಪು ಮಾಡುತ್ತೇವೆ: ಕೆಲವು ಪ್ರಾರ್ಥನೆಗಳು ದೇವರಿಗೆ "ಬಹಳ ಸಣ್ಣವುಗಳಾಗಿವೆ" ಇಲ್ಲವೇ "ಬಹಳ ದೊಡ್ಡವುಗ ಳಾಗಿವೆ" ಎಂದು ನಾವು ಯೋಚಿಸುತ್ತೇವೆ. ಯಾವುದೂ "ಬಹಳ ಸಣ್ಣದು" ಇಲ್ಲವೇ "ಬಹಳ ದೊಡ್ಡದು" ಆಗಿರುವದಿಲ್ಲ.

*ಪ್ರಾರ್ಥನೆಯು ಒಂದು ಅದ್ಭುತಕಾರ್ಯವಾಗಿರುವದಿಲ್ಲ.* "ದಿನಕ್ಕೊಂದು ಅದ್ಭುತಕಾರ್ಯವು ಸೈತಾನನನ್ನು ದೂರ ಇಡುವದಿಲ್ಲ." ನಂಬಿಕೆಯು ಜಗತ್ತನ್ನು ಜಯಿಸುತ್ತದೆ. ಬಿರುಗಾಳಿಯ ಮಧ್ಯದಲ್ಲಿ ಯೇಸುವಿಗೆ ಅಪೊಸ್ತಲರು ಗಟ್ಟಿಯಾಗಿ ಕೂಗಿದರು! ಅವರ ವಿಶ್ವಾಸದ ಕೊರತೆಗಾಗಿ ಆತನು ಯಾವಾಗಲೂ ಆಶ್ಚರ್ಯಪಡುತ್ತಾನೆ. "ಅಲ್ಪ ವಿಶ್ವಾಸಿಗಳೇ!" ಎಂಬುದು ಹನ್ನೆರಡು ಜನರ ಕಡೆಗೆ ಆತನ ಒಂದೇ ಗದರಿಕೆಯಾಗಿತ್ತು (ಮತ್ತಾಯ 14:31; ಇತ್ಯಾದಿ.) ಪ್ರಾರ್ಥನೆಯು ನಮ್ಮ ಕೆಲಸ, ಪ್ರಯತ್ನ ಇಲ್ಲವೇ ಜೀವಕ್ಕೆ ಪರ್ಯಾಯವಾಗಿರುವದಿಲ್ಲ. ಪ್ರಾರ್ಥನೆಯು ದೇವರನ್ನು "ಉಪಯೋಗಿಸುವುದು" ಆಗಿರುವದಿಲ್ಲ - ಪ್ರಾರ್ಥನೆಯು ಕೆಲಸಕ್ಕೆ ಹಾಜರಾಗುವುದು ಆಗಿದೆ. ಪ್ರಾರ್ಥನೆಯು ಅನಂತರ "ನಾವು ಎಲ್ಲರೂ ಎಂದೆಂದಿಗೂ ಸುಖವಾಗಿ ಜೀವಿಸುವೆವು" ಎಂದು ಹೇಳುವ "ಯಕ್ಷಣಿ ಕಥೆ"ಯಾಗಿರುವದಿಲ್ಲ. ಪ್ರಾರ್ಥನೆಯು ಯುದ್ಧ, ಹೋರಾಟ ಮತ್ತು ಬದಲಾವಣೆ ಆಗಿದೆ. ಪ್ರಾರ್ಥನೆಯು ಪ್ರಾಣದ ವ್ಯಾಯಾಮ ಶಾಲೆಯಾಗಿದೆ. ನೀನು ಕೇಳಿದ್ದನ್ನು ಪಡೆದುಕೊಳ್ಳದೇ ಇರುವದಕ್ಕಾಗಿ ದೇವರ ಕಡೆಗೆ ಗುಣಗುಟ್ಟುವುದು ಹಟಮಾರಿತನವಾಗಿದೆ; ಕ್ವಚಿತವಾಗಿ ಕೇಳುವುದು ಅವಿಶ್ವಾಸವಾಗಿದೆ. *ಎರಡೂ* ತಪ್ಪಾದವುಗಳಾಗಿರುತ್ತವೆ.

*ಪ್ರಾರ್ಥನೆಯು ಎಂದೂ ಗರ್ವವಾಗಿರುವದಿಲ್ಲ.* ಪ್ರಾರ್ಥನೆಯು ಸಹಾಯ ಹೀನತೆಯಾಗಿರುತ್ತದೆ. ಆತ್ಮಿಕತೆಯ ತಿರುಳು ದೇವರಲ್ಲಿಯ ಶಿಶುಭಾವದ ನಂಬಿಕೆಯಾಗಿದೆ. ತಾವು ಕೇಳಿದ್ದನ್ನು ಯಾವಾಗಲೂ ಹೊಂದಿಕೊಳ್ಳುವದರಲ್ಲಿ ಹೊಗಳಿಕೊಳ್ಳುವ ಜನರು ನನ್ನನ್ನು ಭಯಪಡಿಸುತ್ತಾರೆ. ಪ್ರಾರ್ಥನೆಯು ಯಾರನ್ನಾದರೂ ಹೆಚ್ಚಿನವನೆಂಬುದನ್ನು ಭಾವಿಸುವಂತೆ ಮಾಡಿದರೆ, ಆಗ ಅವನು ಪ್ರಾರ್ಥಿಸಿರುವದಿಲ್ಲ! ಯಾರೂ ಎಂದೂ "ಅದರ ಕಡೆಗೆ ಒಳ್ಳೆಯವರು" ಆಗಿರುವದಿಲ್ಲ ಅದರ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವುದು ಅದನ್ನು ಕಳೆದುಕೊಳ್ಳುವುದಾಗಿದೆ. ಬೈಬಲು ಪ್ರಾರ್ಥನೆಯೊಂದಿಗೆ "ಪರ್ವತದ ಮೇಲಿನ ಅನುಭವವನ್ನು" ಸತತವಾಗಿ ಒದಗಿಸುವದಿಲ್ಲ. ಪ್ರಾರ್ಥನೆಯು ಅಕ್ಷರಶಃವಾಗಿ ದೇವರ ಮೇಲೆ ನಮ್ಮ ಕರೆಯಾಗಿರುವದಿಲ್ಲ ... ಪ್ರಾರ್ಥನೆಯು ದೇವರನ್ನು ನಮ್ಮ ಮೇಲೆ ಕರೆಯುವಂತೆ ಬಿಡುವದಾಗಿದೆ. ಪ್ರಾರ್ಥನೆ ಮತ್ತು ಗರ್ವ ಮಿಶ್ರವಾಗುವದಿಲ್ಲ.

*ಪ್ರಾರ್ಥನೆಯು ತ್ಯಜಿಸುವುದೂ ಆಗಿರುವದಿಲ್ಲ!* ಯಾವುದನ್ನೂ ಎಂದೂ ನಿರೀಕ್ಷಿಸದೇ ಕೆಲವರು ಪ್ರಾರ್ಥಿಸುತ್ತಾರೆ, ಯಾಕಂದರೆ ಅದು ಒಂದು ಆಜ್ಞೆಯಾಗಿದೆ. ನೀವು ಅದನ್ನು ನಂಬದಿದ್ದರೆ, ಅದಕ್ಕಾಗಿ ಪ್ರಾರ್ಥಿಸಬೇಡಿರಿ! ಪ್ರಾರ್ಥನೆಯು ಪ್ರತಿಯೊಬ್ಬ ವಿಶ್ವಾಸಿಯ ಜನ್ಮಸಿದ್ಧ ಹಕ್ಕು ಆಗಿರುತ್ತದೆ - ಉನ್ನತದಲ್ಲಿರುವ ಶ್ರೇಷ್ಠರಾದ ಕೆಲವೇ ದೇವ ಜನರ

ವರವಾಗಿರುವದಿಲ್ಲ! "ಅದು ಯಾವುದೇ ಒಳ್ಳೆಯದನ್ನು ಮಾಡುವದಿಲ್ಲ" ಎಂದು ಹೇಳುತ್ತ ಪ್ರಾರ್ಥನೆಯಿಂದ ಏಳುವುದು ಅಪನಂಬಿಗಸ್ತಿಕೆಯಾಗಿರುತ್ತದೆ. ದೇವರು ನಂಬಿಸಗ್ಯನಾಗಿದ್ದಾನೆ. ಆತನು ಶಕ್ತನಾಗಿದ್ದಾನೆ. ಪ್ರಾರ್ಥನೆಯು ದೇವರೊಂದಿಗೆ ಒಂದು ಸಮಾಗಮ ಸ್ಥಾನವಾಗಿದೆ. "ದೇವರ ನಂಬಿಗಸ್ತಿಕೆಯನ್ನು ಒಪ್ಪಿಕೊಳ್ಳುತ್ತೇನೆ" ಎಂದು ಹೇಳುವುದು ಪ್ರಾರ್ಥನೆಯಾಗಿದೆ. ದೇವರು ಏನು ಮಾಡಿಲ್ಲ ಎಂದು ನೀನು ತಿಳಿದಿರುವ ಕಡೆಗೆ ನೀನು ನೋಡಬಹುದು. ಇಲ್ಲವೇ ಆತನು ಮಾಡಿದ್ದರ ಕಡೆಗೆ ನೀನು ನೋಡ ಬಹುದು. ದೇವರು ತನ್ನ ಮಹಾಜ್ಞಾನದಲ್ಲಿ ಮಾನವ ಪ್ರಾರ್ಥನೆಯು ಸಂಗತಿಗಳು ಸಂಭವಿಸುವಂತೆ ಮಾಡಲು ಒಂದು ಸ್ಥಳವನ್ನು ಸೃಷ್ಟಿಸಿರುವನು. ಅದನ್ನು ನಂಬು - ಅದನ್ನು ಉಪಯೋಗಿಸು.

◇◇◇◇◇◇◇◇

# ಆತ್ಮನಲ್ಲಿ ಪ್ರಾರ್ಥಿಸುವುದು

## ಎಫೆಸ 6:18; ಯೂದ 20

*ಪರಿಶುದ್ಧಾತ್ಮ ಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ (ಎಫೆಸ 6:18).*

ಪ್ರಿಯರೇ, ನೀವಾದರೋ ನಿಮಗಿರುವ ಅತಿಪರಿಶುದ್ಧವಾದ ಕ್ರಿಸ್ತನಂಬಿಕೆಯನ್ನು ಆಧಾರ ಮಾಡಿಕೊಂಡು ಭಕ್ತಿಯಲ್ಲಿ ಅಭಿವೃದ್ಧಿ ಹೊಂದುತ್ತಾ ಪರಿಶುದ್ಧಾತ್ಮ ಪ್ರೇರಿ ತರಾಗಿ ಪ್ರಾರ್ಥನೆ ಮಾಡುತ್ತಾ ... ಕಾಪಾಡಿಕೊಳ್ಳಿರಿ (ಯೂದ 20, 21).

ಹಾಗೆ ಪರಿಶುದ್ಧಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯಮಾಡುತ್ತಾನೆ. ಹೇಗಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪರಿಶುದ್ಧಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ (ರೋಮಾಪುರ 8:26).

"ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು. ಆ ಸಹಾಯಕನು ಯಾರಂದರೆ ಸತ್ಯದ ಆತ್ಮನೇ ..." (ಯೋಹಾನ 14:16, 17).

"ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ... ನನ್ನನ್ನೇ ಮಹಿಮೆಪಡಿಸುವನು" (ಯೋಹಾನ 16:13, 14).

ಎರಡು ಮೂಲ ವಿಷಯಗಳು ಸಭೆಯನ್ನೂ ಜಗತ್ತನ್ನೂ ನಾಶಪಡಿಸುತ್ತವೆ; ಬೈಬಲಿನ ಬಗ್ಗೆ ಅಜ್ಞಾನ ಮತ್ತು ಆತ್ಮಿಕ ಅಪ್ರಭುದ್ಧತೆ. ಬೈಬಲಿನ ಜ್ಞಾನವು ಅಗತ್ಯವಾದದ್ದು; ಪ್ರಭುದ್ಧ ತೆಯು ಕಡ್ಡಾಯವಾದದ್ದು. ಪರಿಶುದ್ಧಾತ್ಮನು ಇರುವನು. ಆತನು "ಅದು" ಇಲ್ಲವೇ ಒಂದು "Ghost" ಆಗಿರುವದಿಲ್ಲ. ಆತನು ದೇವತ್ವದ ಮೂರನೆಯ ಸದಸ್ಯನಾಗಿದ್ದಾನೆ.

ಕ್ರೈಸ್ತರು "ಆತ್ಮದಲ್ಲಿ" ಜೀವಿಸುವರು. ಕ್ರೈಸ್ತರು "ಆತ್ಮನಲ್ಲಿ" ಜೀವಿಸುವರು. ಇದು ನಮ್ಮ ವಿಚಾರವನ್ನೂ ರೂಢಿಯನ್ನೂ ಕೇಳುವುದು. ಪರಿಶುದ್ಧಾತ್ಮನು ಅಲಕ್ಷಿಸಲ್ಪಡಬಾರದು. ಗಮನಿಸಲ್ಪಡಲಾರದೇ ಇರಬಾರದು ಇಲ್ಲವೇ "ದುರುಪಯೋಗಪಡಿಸಲ್ಪಡಬಾರದು" ಪರಿಶುದ್ಧಾತ್ಮನು "ಹೆಣದಂತೆ ಸತ್ತವನಾಗಲಿ" ಇಲ್ಲವೇ "St. Vitus Dance"ನಂತೆ ಹುಚ್ಚನೂ ಆಗಿರುವದಿಲ್ಲ. ಈ ಸತ್ಯವನ್ನು ಗಂಭೀರವಾಗಿ ಅಧ್ಯಯನ ಮಾಡಲು ನಾವು ನಮ್ಮನ್ನು ಸಮರ್ಪಿಸಿಕೊಳ್ಳಬೇಕು.

## ತಪ್ಪು ತಿಳುವಳಿಕೆಗಳು

ಇಂದು ಪರಿಶುದ್ಧಾತ್ಮನ ಸುತ್ತಲೂ ಅನೇಕ ತಪ್ಪು ತಿಳುವಳಿಕೆಗಳು ಇರುತ್ತವೆ.

(1) *ಸುಳ್ಳು ಆತ್ಮಿಕತೆ.* ಆತ್ಮಿಕತೆಯು ಪ್ರತೀಕಾರದೊಂದಿಗೆ ಹಿಂದಿರುಗಿದೆ. ಧರ್ಮವು ಸಜೀವವಾಗಿದೆ, ಆದರೆ ಅದು ಬೈಬಲಿಗೆ ಅನುಗುಣವಾಗಿದೆಯೋ? ಆತ್ಮಿಕತೆಯು ಸುಲಭವಾಗಿ ಕಪಟತನವಾದದ್ದಾಗಬಹುದು. ನಮ್ಮಲ್ಲಿ ಹೆಚ್ಚಾದವರು ಸುಲಭವಾಗಿ ಮೂರ್ಖರಾಗಿ ಮಾಡಲ್ಪಡಬಹುದು. ಇದರ ಬಗ್ಗೆ ಮತ್ತಾಯ 6ರಲ್ಲಿ ಯೇಸುವು ಹಾಸ್ಯಕರವಾಗಿ ಮತಾಡಿದ್ದಾನೆ. ಜನರು ತಮ್ಮ ಕಾಣಿಕೆಗಳನ್ನು ತುತೂರಿಗಳೊಂದಿಗೆ ಕೊಟ್ಟರು! ಗುಂಪುಗಳಲ್ಲಿ ಅವರು ಗಟ್ಟಿಯಾಗಿ, ಧೀರ್ಘವಾಗಿ ಪ್ರಾರ್ಥಿಸಿದರು. ತಮ್ಮ ಉಪವಾಸವನ್ನು ಪ್ರದರ್ಶಿಸಲು ತಮ್ಮ ಮುಖವನ್ನು ವಿಕಾರಗೊಳಿಸಿಕೊಂಡರು. ಎಂಥಾ ಹುಚ್ಚುತನ! ಇನ್ನೂ, ಅವರು ಜಯಶಾಲಿಗಳಾದರು! "ಅವರಿಗೆ ಅವರ ಪ್ರತಿಫಲ ದೊರೆಯಿತು" ಎಂದು ಯೇಸು ಹೇಳಿದನು.

ಸ್ಪಷ್ಟವಾಗಿ ಆತ್ಮಿಕತೆಯು ಪರಿಶುದ್ಧಾತ್ಮನೊಂದಿಗೆ ಸಂಬಂಧಿಸಲ್ಪಡತಕ್ಕದ್ದು! ಆತ್ಮನಿಲ್ಲದೇ ಒಬ್ಬನು ಆತ್ಮಿಕತೆಯುಳ್ಳವನಾಗಿರಲಾರನು! ಆತ್ಮಿಕತೆಯು ಸಹಾಯ ಹೀನತೆಯಿಂದ ಹೊರಗೆ ಬರುತ್ತದೆ. ಆತ್ಮಿಕತೆಯು ತಿರುಳು ದೇವರ ಮೇಲೆ ಅವಲಂಭಿಸುವಿಕೆಯಾಗಿದೆ. ಕ್ರೈಸ್ತತ್ವವು ಗರ್ವದಿಂದ ಬೀಗುವ ವರೆಗೆ ಅದ್ಭುತವಾದದ್ದಾಗಿರುತ್ತದೆ.

(2) *ಸುಳ್ಳು ಪರಿಶುದ್ಧಾತ್ಮ.* ಪರಿಶುದ್ಧಾತ್ಮನನ್ನು ಅರಿಕೆಮಾಡುವವರು ಬಹಳ ಸಲ ಬೈಬಲಿನ ಬಗ್ಗೆ ಅಜ್ಞಾನಿಗಳೂ ಅರ್ಥವಿಲ್ಲದ ಮಾತುಗಳುಳ್ಳವರೂ ಆಗಿರುತ್ತಾರೆ. ಪರಿಶುದ್ಧ ಬರಹಗಳಿಗನುಗುಣವಾದವನೂ ಅರ್ಥವುಳ್ಳವನೂ ಆಗಿರುತ್ತಾನೆ. ಆತನು "ಮೊದಲು ಮಾತಾಡುವಾತನ" ಮಟ್ಟಕ್ಕೆ ಇಳಿಸಲ್ಪಡಬಾರದು. ಪರಿಶುದ್ಧಾತ್ಮನ ಮೇಲೆ ಕೇಂದ್ರೀಕರಿಸುವವನ ಬಗ್ಗೆ ಎಚ್ಚರಿಕೆಯಿಂದ ಇರಿ. ಬೈಬಲಿನಲ್ಲಿ ಆತ್ಮನಿಗೆ ಹೆಸರು ಕೊಡಲ್ಪಟ್ಟಿಲ್ಲ. ಆತನು ದೇವತ್ವದ "ದೃಶ್ಯಗಳ ಹಿಂದೆ" ಇರುವ ಸದಸ್ಯನಾಗಿದ್ದಾನೆ. ಯೇಸುವನ್ನು ಗೌರವಿಸುವದರಿಂದ ದೇವರನ್ನು ಮೆಚ್ಚಿಸುವದಕ್ಕಾಗಿ ಮಾತ್ರವೇ ಜೀವಿಸುತ್ತಾನೆ. ಪರಿಶುದ್ಧಾತ್ಮನು ಇಂದು ಹೊಂದಿಕೊಳ್ಳುವ ಎಲ್ಲಾ ಗಮನದಿಂದ ಮುಜುಗರಗೊಳ್ಳುವಂತೆ ಮಾಡಬಹುದು. ಪರಿಶುದ್ಧಾತ್ಮನಿಗಾಗಿ ಬೋಧಿಸುವವರು ಪರಿಶುದ್ಧ ಬರಹಗಳನ್ನು ಅಲ್ಲಗಳೆಯುವದರ ಬಗ್ಗೆ, ವ್ಯತಿರಿಕ್ತವಾಗಿರುವದರ ಬಗ್ಗೆ ಎಚ್ಚರಿಕೆಯಿಂದ ಇರಿ. ಆತನು ಬೈಬಲನ್ನು ಪ್ರೇರೇಪಿಸಿದನು (2 ಪೇತ್ರ 1:20, 21); ಅದನ್ನು ಕಡೆಗಣಿಸಲು ಇಲ್ಲವೇ ವಿರೋಧಿಸಲು ಆತನು ಏನನ್ನೂ ಹೇಳುವದಿಲ್ಲ ಇಲ್ಲವೇ ಮಾಡುವದಿಲ್ಲ. ಆಳವಾದ ಬೈಬಲ ಅಧ್ಯಯನವನ್ನು ಬಿಟ್ಟು ಆತ್ಮನನ್ನು ಬಯಸುವದರ ಬಗ್ಗೆ ಎಚ್ಚರಿಕೆಯಿಂದಿರಿ.

(3) *ಸುಳ್ಳು ಆತ್ಮಿಕ ಬಲ.* ಇಂದು ಅನೇಕರು ಪರಿಶುದ್ಧಾತ್ಮನನ್ನು ಉಪಯೋಗಿಸಿ ದುಡುಕಿನ ಶಕ್ತಿಯ ಹೇಳಿಕೆಗಳನ್ನು ಕೊಡುತ್ತಾರೆ. ಹಣವು "ಆಕಾಶದಿಂದ ಬೀಳುವುದು" ; ಎಲ್ಲಾ ರೋಗವು ವಾಸಿಯಾಗುವುದು; ಅವರು ಜಯದಿಂದ ಜಯಕ್ಕೆ ಹೋಗುವರು.

ಇದು ಜೀವವಾಗಲಿ ಇಲ್ಲವೇ ಆತ್ಮವಾಗಲೀ ಆಗಿರುವದಿಲ್ಲ. ಪ್ರಾರ್ಥನೆಯು ಸಹಾಯ ಹೀನತೆಯಾಗಿದೆ. ಈ ಕಾರಣದಿಂದ ಯಥಾರ್ಥವಾದ ಪ್ರಾರ್ಥನೆಯು ಸ್ವಾಭಾವಿಕ ವಾದದ್ದಾಗಿರುವದಿಲ್ಲ. ಆತ್ಮನಿಂದ ನೀವು ವೈಯಕ್ತಿಕ ಮಹಿಮೆಯನ್ನು ಹುಡುಕಿದರೆ, ನೀವು ತಪ್ಪು ಮಾಡುತ್ತೀರಿ! ವೈಯಕ್ತಿಕ ಅದ್ಭುತಕಾರ್ಯಗಳನ್ನು ಬಯಸುವುದು, ವೈಯ ಕ್ತಿಕ ಬಲವನ್ನು ಹೊಂದಿಕೊಳ್ಳುವುದು, "ನನ್ನನ್ನು ಚೆನ್ನಾಗಿ ಕಾಣುವಂತೆ ಮಾಡಲು" ಆತ್ಮನನ್ನು ಉಪಯೋಗಿಸುವುದು, ಸುಳ್ಳಾಗಿರುತ್ತದೆ. "ಪರಿಶುದ್ಧಾತ್ಮ ಭರಿತರಾಗಿರಿ" (ಎಫೆಸ 5:18) ಎಂದು ಪೌಲನು ನಮಗೆ ಆಜ್ಞಾಪಿಸಿದ್ದಾನೆ. "ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಹೊಂದಿರಿ" ಎಂದು ನಾವೆಂದೂ ಆಜ್ಞಾಪಿಸಲ್ಪಟ್ಟಿರುವದಿಲ್ಲ. "ಪರಿಶುದ್ಧಾ ತ್ಮನು ಅಂತರ್ಯದಲ್ಲಿ ವಾಸಿಸಬೇಕೆಂದಿದ್ದರೆ" ಇಲ್ಲವೇ "ಪರಿಶುದ್ಧಾತ್ಮನಿಂದ ವರವುಳ್ಳವರಾಗಬೇಕೆಂದಿದ್ದರೆ" ನಾವು "ಪರಿಶುದ್ಧಾತ್ಮನಿಂದ ತುಂಬಲ್ಪಡಬೇಕು" ಎಂದು ನಮಗೆ ಹೇಳಲ್ಪಟ್ಟಿದೆ. ಇದು ನಾವು ವಿಧೇಯರಾಗತಕ್ಕ ಆಜ್ಞೆಯಾಗಿದೆ. ಈ ಆಜ್ಞೆಯು ಆಜ್ಞಾರ್ಥಕ ಭಾವನೆಯಲ್ಲಿದೆ: "ನೀವು ತುಂಬಲ್ಪಡತಕ್ಕದ್ದು" ಇದು ಕರ್ಮಣಿ ಪ್ರಯೋಗದಲ್ಲಿದೆ: "ಪರಿಶುದ್ಧಾತ್ಮನು ನಿಮ್ಮನ್ನು ತುಂಬಲಿ" ನಾವು ಗ್ಲಾಸನ್ನು ಇಲ್ಲವೇ ಬಕೆಟನ್ನು ತುಂಬುವಂತೆ ನಾವು ನಮ್ಮನ್ನು ಪರಿಶುದ್ಧಾತ್ಮನಿಂದ ತುಂಬುವುದಿಲ್ಲ ಎಂದು ಬೇರೆ ಮಾತಿನಲ್ಲಿ ಹೇಳಬಹುದು. ಪರಿಶುದ್ಧಾತ್ಮನು ನಮ್ಮೊಳಗೆ ವಾಸಿಸುತ್ತಾನೆ. ನಾವು ನಮ್ಮನ್ನು ಆಶೀರ್ವದಿಸಲು ಬಿಡಲ್ಪಡುತ್ತಾನೆ. ನಾವು ನಮ್ಮನ್ನು ಸೈತಾನನಿಗೆ ಇಲ್ಲವೇ ಪರಿಶುದ್ಧಾತ್ಮನಿಗೆ ಕೊಡಬಹುದು.

(4) *ಸುಳ್ಳಾದ, ಬಾಲಿಶವಾದ ಕಲ್ಪನೆಗಳು.* ಸುಳ್ಳು ಭಾವನೆಯುಳ್ಳ ಮತ್ತು ಬಾಲಿಶಭಾವದ ಕ್ರೈಸ್ತರು ಶರೀರ ಭಾವದವರಾಗಿದ್ದಾರೆ ಆದರೆ ಆತ್ಮಿಕತೆಯುಳ್ಳವರಾಗಿ ರುವದಿಲ್ಲ (1 ಕೊರಿಂಥ 3). ಪರಿಶುದ್ಧಾತ್ಮನು ಗ್ರಹಿಸಬಲ್ಲದವನಾಗಿರು ವದಿಲ್ಲ, ಅಂದರೆ ಬಾಲಿಶಭಾವದ ಗಲಿಬಿಲಿಯೊಂದಿಗೆ ತುಂಬಿದವನಾಗಿರುವದಿಲ್ಲ. ಪರಿಶುದ್ಧಾತ್ಮನು ಅಪೊಸ್ತಲರಿಗೆ ಎಲ್ಲಾ ಸತ್ಯವನ್ನು ಬೋಧಿಸುವನೆಂದು ಯೇಸು ಹೇಳಿದನು (ಯೋಹಾನ 13-17). ಈ ವಾಕ್ಯದಿಂದ, ಜಗತ್ತು ಪಾಪದ, ನೀತಿಯ ಮತ್ತು ನ್ಯಾಯ ತೀರ್ವಿಕೆಯ ಅರುಹನ್ನು ಹೊಂದಿಕೊಳ್ಳುವುದು (ಯೋಹಾನ 16:7-11). ಯೇಸುವು ಅಪೊಸ್ತಲರಿಗೆ ಏನಾಗಿದ್ದಾನೋ ಅದು ಪರಿಶುದ್ಧಾತ್ಮನು ನಮಗಾಗಿದ್ದಾನೆ. ಮನಸ್ಸಿನ ನವೀಕರಣದಿಂದ ಮಾತ್ರವೇ ಪ್ರಬುದ್ಧತೆಯು ಬರುವುದು (ರೋಮಾಪುರ 12:1, 2). ಪ್ರಭಾವ ಬೀರುವ ಸ್ಟಿಕ್ಕರುಗಳು, "ಯೇಸುವು ಉತ್ತರವಾಗಿದ್ದಾನೆ" ಎಂದು ಕೂಗುವವು. *ಯಾವುದಕ್ಕೆ?* "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ" ಎಂದು ಮಾತ್ರವೇ ಯೇಸು ಹೇಳಿದನು (ಯೋಹಾನ 14:6).

ಬೈಬಲು ದೇವರ ಅಂತಿಮ ವಾಕ್ಯವಾಗಿದೆ. ಈ ಸತ್ಯವನ್ನು ನಾವೆಂದೂ ಮರೆಯ ಬಾರದು. ಬೈಬಲು *ನನ್ನ* ದಯೆಯ ಮೇಲೆ ಇರುವದಿಲ್ಲ. "ಬೈಬಲ್ ನನಗೆ ಹೇಳು ತ್ತದೆ" ಎಂದು ಹೇಳುವುದು ತಪ್ಪಾಗಿರುತ್ತದೆ. "ಬೈಬಲ್ ಹೇಳುತ್ತದೆ" - *ಅವಧಿ!* ದೇವರ ಸಭೆಯು ಸರ್ಕಸ್ ಆಗಿರುವದಿಲ್ಲ. ಪರಿಶುದ್ಧಾತ್ಮನು ಸಾಹಸಗಳನ್ನು ಮಾಡುವದಿಲ್ಲ. ವೈಯಕ್ತಿಕ ಅನುಭವಗಳು, ಎಷ್ಟೇ ಬೆಲೆಯುಳ್ಳವುಗಳಾಗಿದ್ದರೂ, ಬೈಬಲಿನೊಂದಿಗೆ ಸರಿಸಮಾನವಾ ದವುಗಳಾಗಿರುವದಿಲ್ಲ. ಅದು ಸಂಪೂರ್ಣವಾದದ್ದೂ ಅಂತಿಮವಾದದ್ದೂ ಆಗಿರುತ್ತದೆ.

(5) *ಸುಳ್ಳು ಬಲ.* ಪರಿಶುದ್ಧಾತ್ಮನು ನಮ್ಮ ಬಲವಾಗಿದ್ದಾನೆ ಆದರೆ, ಅಂಥ ಒತ್ತುಕೊಡುವಿಕೆಯು ಸುಲಭವಾಗಿ ತಪ್ಪಾಗಿ ಉಪಯೋಗಿಸಲ್ಪಡಬಹುದು. ಬಲವನ್ನು ಅದರ ಸ್ವಂತಕ್ಕಾಗಿ ಹುಡುಕುವುದು ಮಂತ್ರ ಕಾರ್ಯಮಾಡುವುದಾಗಿದೆ. ಮಂತ್ರ ಮಾಡುವುದು ಇಲ್ಲವೇ ಯಕ್ಷಣಿ ವಿದ್ಯೆಯು ತಪ್ಪಾಗಿರುತ್ತದೆ. ಯಾಕಂದರೆ ಮಂತ್ರ

ಮಾಡುವವನು ಬಲದ ವ್ಯಕ್ತಿಯು ಇಲ್ಲದೇ ಅದ್ವಿತೀಯ ಶಕ್ತಿಯನ್ನು ಬಯಸುತ್ತಾನೆ. ದೇವರೊಂದಿಗೆ ವೈಯಕ್ತಿಕ ಸಂಬಂಧವಿಲ್ಲದೆ ಬಲವು ತಪ್ಪಾದದ್ದಾಗಿರುತ್ತದೆ. ಪರಿಶುದ್ಧಾತ್ಮನು ಒಬ್ಬ ವ್ಯಕ್ತಿಯಾಗಿದ್ದಾನೆ; ಆತನನ್ನು ನಾವು ಅಭಿನಯಕ್ಕೆ ಕೆಳಗಿಳಿಸಬಾರದು.

## ಸತ್ಯಾಂಶಗಳು, ಸತ್ಯಾಂಶಗಳು ಮತ್ತು ಹೆಚ್ಚು ಸತ್ಯಾಂಶಗಳು

ಮೂರು ಕಾರಣಗಳಿಗಾಗಿ ನಾವು "ಆತ್ಮದಲ್ಲಿ" ಪ್ರಾರ್ಥಿಸುತ್ತೇವೆ:

(1) ಇದು ಪ್ರಾರ್ಥನೆಯನ್ನು ಯಾಂತ್ರಿಕತೆಯಿಂದ ಮೇಲಕ್ಕೆ ಎತ್ತುತ್ತದೆ. ನಾವು "ಧರ್ಮದಲ್ಲಿ ಪರಿಣಿತರಾಗಿರಬಹುದು" ಮತ್ತು "ಆತ್ಮದಲ್ಲಿ ಸತ್ತವರಾಗಿರಬಹುದು" ಪ್ರಾರ್ಥನೆಯನ್ನು ಪ್ರಕಟಿಸಲು ದೇವರನ್ನು, ಅದನ್ನು ರೂಢಿಸಲು ಕುಮಾರನನ್ನು ಮತ್ತು ನಮ್ಮನ್ನು ಶಕ್ತರನ್ನಾಗಿ ಮಾಡಲು ಪರಿಶುದ್ಧಾತ್ಮನನ್ನು ತೆಗೆದುಕೊಳ್ಳುವಷ್ಟು ಪ್ರಾರ್ಥನೆಯು ದೊಡ್ಡದಾಗಿರುತ್ತದೆ. ಪ್ರಾರ್ಥನೆಯು ಯಾಂತ್ರಿಕವಾದದ್ದಾಗಿರಬಹುದು ಇಲ್ಲವೇ ಆತ್ಮಿಕವಾದದ್ದಾಗಿರಬಹುದು - ಅದು ಎರಡೂ ಆಗಿರಲಾರದು.

ಮಾರ್ಗದರ್ಶನಕ್ಕಾಗಿ ನಾವು ದೇವರನ್ನು ಕೇಳುವಾಗ, ಆತನು ನಮಗೆ, "ನಿನ್ನ ಜೀವಿತವನ್ನು ನನಗೆ ಕೊಡು" ಎಂದು ಮಾತ್ರ ಕೇಳುವನು. ಇದು ವಾಸ್ತವಿಕತೆಯಾಗಿದೆ ಮತ್ತು ಪ್ರಾಧಾನ್ಯತೆಯಾಗಿದೆ. ದೇವರು ನಮ್ಮನ್ನು ಪ್ರತ್ಯೇಕವಾದ, ನಿರ್ದಿಷ್ಟವಾದ ವಿಷಯಗಳಲ್ಲಿ ನಮಗೆ ಮಾರ್ಗದರ್ಶನ ಮಾಡಲು ಬಯಸುವದಿಲ್ಲ. ದೇವರು ನಮ್ಮ ಜೀವಿತಗಳನ್ನು ಕೇಳುತ್ತಾನೆ, ನಿರ್ದಿಷ್ಟವಾದ ಕ್ಷೇತ್ರಗಳಲ್ಲಿ ನಮಗೆ ಸಮಸ್ಯೆಗಳಿವೆ ಯಾಕಂದರೆ ನಮ್ಮ ಇಡೀ ಜೀವಿತಗಳನ್ನು ಆತನಿಗೆ ಕೊಡುವದನ್ನು ನಿರಾಕರಿಸುತ್ತೇವೆ.

ನಿಯಮದ ಭಾವನೆಯನ್ನು ಕಡೆಗಣಿಸುವಾಗ ನಿಯಮದ ಮಾತುಗಳನ್ನು ಕೈಕೊಳ್ಳುವುದು ಸುಲಭವಾಗಿರುತ್ತದೆ. ಕೆಲವರು "ಸೈತಾನನಿಗಿಂತ ಹೆಚ್ಚಾಗಿ ಪರಿಶುದ್ಧಾತ್ಮನಿಗೆ ಭಯಪಡುವವರಾಗಿದ್ದಾರೆ" ಆತ್ಮಿಕ ಪ್ರಾರ್ಥನೆಯು ವಿಚಾರವನ್ನೂ ಆಳವನ್ನೂ ಕೇಳುತ್ತದೆ. ಅನೇಕರು ವಿಚಾರಕ್ಕೆ "ಬೆನ್ನು ತಟ್ಟುವ" ಉತ್ತರಗಳನ್ನು ಆಯ್ದುಕೊಳ್ಳುವರು. ಯೋಚಿಸುವುದು ತೀರ್ಮಾನಗಳನ್ನು ಒಳಗೊಂಡಿರುವುದು. ಆಳವು ಅನುಭವದಿಂದ ಬೆಳವಣಿಗೆಯನ್ನು ಕೇಳುವುದು. ನಮ್ಮಲ್ಲಿ ಬಹಳ ಸ್ವಲ್ಪ ಜನರು ಅಷ್ಟರವರೆಗೆ ಮುಂದರಿದಿರುವೆವು. ಉದ್ವೇಗವು ಪರಿಶುದ್ಧಬರಹಕ್ಕನುಗುಣವಾಗಿದೆ. ಭಾವನಾತ್ಮಕತೆಯು ಆಗಿರುವದಿಲ್ಲ. ಉದ್ವೇಗಕ್ಕೆ ನಾವು ಎಂದೂ ಭಯಪಡಬಾರದು. ಆತ್ಮನಲ್ಲಿ ಪ್ರಾರ್ಥಿಸುವುದು ಯಾಂತ್ರಿಕ ಅಟರ್ಜಿಯಿಂದ ವೈಯಕ್ತಿಕ ಆತ್ಮಿಕತೆಗೆ ಮೇಲಕ್ಕೆತ್ತುತ್ತದೆ.

(2) ಹೇಗೆ ಪ್ರಾರ್ಥಿಸಬೇಕು ಎಂಬುದನ್ನು ನಾವು ತಿಳಿದಿರುವದಿಲ್ಲ (ರೋಮಾಪುರ 8:26). ನಾವು ಹೆಚ್ಚು ದಿನ ಜೀವಿಸಿದಂತೆ, ನಾನು ಎಷ್ಟು ಸ್ವಲ್ಪ ತಿಳಿದಿದ್ದೇನೆ ಎಂದು ತಿಳಿದುಕೊಳ್ಳುವೆನು. ನಾನು ಯುವಕನಾಗಿದ್ದಾಗ, ನನಗೆ ಯಾವ ಭಾವನೆಯಿರಲಿಲ್ಲ-ಆದರೆ ಅದನ್ನು ನಾನು ತಿಳಿದಿರಲಿಲ್ಲ! ಈಗ ನಾನು ಪ್ರಾಯದವನಾಗಿದ್ದೇನೆ, ನನಗೆ ತಿಳಿದಿಲ್ಲವೆಂದು ತಿಳಿದಿರುತ್ತೇನೆ. ಪರಿಶುದ್ಧಾತ್ಮನು ನಮ್ಮ ಬಲಹೀನತೆಗಳಿಗೆ ಸಹಾಯಮಾಡುತ್ತಾನೆ. ರೋಮಾಪುರ 8 ಜಯಭರಿತ ಕ್ರೈಸ್ತ ಜೀವಿಸುವಿಕೆಯನ್ನು ಕುರಿತ ಅಧ್ಯಾಯವಾಗಿದೆ. ಸಾಧನವು ದೇವರ ಆತ್ಮನು, ಪರಿಶುದ್ಧಾತ್ಮನು ನಮ್ಮ ಜೀವಿತಗಳಲ್ಲಿ ಸಂಪೂರ್ಣವಾಗಿ ಒಳಗೊಂಡಿದ್ದಾನೆ ಎಂದು ರೋಮಾಪುರ 8 ನಮಗೆ ಬೋಧಿಸುತ್ತದೆ. ಇದರ ಅರ್ಥ, ಆತನು ನಮ್ಮ ಪ್ರಾರ್ಥನೆಗಳಲ್ಲಿ ಸಂಪೂರ್ಣವಾಗಿ ಒಳಗೊಂಡಿದ್ದಾನೆ ಎಂದಾಗುತ್ತದೆ. ಆತ್ಮನಲ್ಲಿ ಕ್ರಿಸ್ತನ ಅಧಿಕಾರದಿಂದ ದೇವರಿಗೆ ಪ್ರಾರ್ಥಿಸುತ್ತೇವೆ! ಆತ್ಮನ ಮುಖ್ಯಕಾರ್ಯವು ನಮ್ಮನ್ನು ಮಾರ್ಪಡಿಸುವುದೆಂದು ರೋಮಾಪುರ 8 ನಮಗೆ ಬೋಧಿಸುತ್ತದೆ. ಶಿಲುಬೆಯ ಬಳಿಯಲ್ಲಿ ಹೇಡಿಗಳಾಗಿದ್ದ ಅಪೊಸ್ತಲರು ಪಂಚಾಶತ್ತಮ ದಿನದಂದು

ಗರ್ಜಿಸುವ ಸಿಂಹಗಳಾದರು. ಭಿನ್ನತೆಯು "ಸಕಾರಾತ್ಮಕ ಯೋಚಿಸುವಿಕೆ"ಯಾಗಿರುವದಿಲ್ಲ ಇಲ್ಲವೇ "ಒಳ್ಳೇ ಪರಿಸರ"ವಾಗಿರುವದಿಲ್ಲ. ಭಿನ್ನತಯು ಆತ್ಮನಾಗಿದ್ದಾನೆ. ಆತ್ಮನು ಅವರನ್ನು ಮಾರ್ಪಡಿಸಿದನು. ಈ ಸಂಗತಿಯು ತಪ್ಪಿಸಿಕೊಳ್ಳದ್ದಾಗಿದೆ: ನಮ್ಮಲ್ಲಿ ಹೆಚ್ಚಾದವರಿಗೆ ನಮ್ಮ ಜೀವಿತಗಳಲ್ಲಿ ಬಲವಾಗಲೀ ಆನಂದ ವಾಗಲೀ ಇರುವದಿಲ್ಲ. ಪರಿಶುದ್ಧಾತ್ಮನು ತನ್ನ ವಾಕ್ಯದ ಮುಖಾಂತರ ನಮಗೆ ಧೈರ್ಯವನ್ನೂ ಅನಂದವನ್ನೂ ಕೊಡುತ್ತಾನೆ. ನಾವು "ದೇವರ ಮಕ್ಕಳಾಗಿದ್ದೇವೆ" ನಾವು ಅನಾಥರಂತೆ ಜೀವಿಸತಕ್ಕದ್ದಲ್ಲ! ಆತ್ಮನಿಂದ ತುಂಬಲ್ಪಟ್ಟ ಜೀವಿತಗಳು ಜೀವಿತಗಳನ್ನು ಬದಲಾಯಿಸುವವು ಮತ್ತು ಮನೆಗಳನ್ನು ಮಾರ್ಪಡಿಸುವವು.

(3) ಪರಿಶುದ್ಧಾತ್ಮನು ನಮಗಾಗಿ ಪರಾರ್ಥ ವಿಜ್ಞಾಪನೆ ಮಾಡುವನು. ರೋಮಾಪುರ 8:26, 27 ಹೀಗೆ ಹೇಳುತ್ತದೆ,

> ಹಾಗೆ ಪರಿಶುದ್ಧಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ. ಹೇಗಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪರಿಶುದ್ಧಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ. ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪರಿಶುದ್ಧಾತ್ಮನ ಮನೋಭಾವವು ಏನೆಂದು ತಿಳಿದದೆ; ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವ ಜನರಿಗೋಸ್ಕರ ಬೇಡಿಕೊಳ್ಳವನೆಂದು ಆತನು ಬಲ್ಲನು.

ಈ ಹೇಳಿಕೆಯು ಕಠಿಣವಾದದ್ದಾಗಿದೆ - ಆದರೆ ಜಗಳವೇಕೆ? ತಳ್ಳಿಬಿಡುವುದೇಕೆ? ಪರಿಶುದ್ಧಾತ್ಮನು ಪರಾರ್ಥ ವಿಜ್ಞಾಪನೆ ಮಾಡುತ್ತಾನೆ. ದೇವರಿಗೂ ಮನುಷ್ಯನಿಗೂ ಯೇಸುವು ಮಾತ್ರವೇ ಮಧ್ಯಸ್ಥನು (1 ತಿಮೊಥೆ 2:5). ಹೀಗಿದ್ದರೂ, ಕ್ರೈಸ್ತರು ಒಬ್ಬರಿಗೊಬ್ಬರು ಪರಾರ್ಥವಿಜ್ಞಾಪನೆ ಮಾಡಿದರೆ, ಪರಿಶುದ್ಧಾತ್ಮನು ಯಾಕೆ ಮಾಡಬಾರದು? ವರ್ಷಗಳ ಹಿಂದೆ ಒಬ್ಬನು, ಕ್ರೈಸ್ತನ ಆತ್ಮನ ಹೊರತಾಗಿ, "ರಕ್ಷಿಸಲ್ಪಟ್ಟರು, ಶುದ್ಧೀಕರಿಸಲ್ಪಟ್ಟರು, ಚೈತನ್ಯಗೊಂಡರು ಮತ್ತು ಕಠಿಣವಾಗಿ ಮಾಡಲ್ಪಟ್ಟರು" ಎಂದು ಗಮನಿಸಿದನು. ಎಂಥಾ ದುಃಖಕರವಾದ ಸಂಗತಿ! ಯೇಸುವು ನಮಗಾಗಿ ಮಧ್ಯಸ್ಥಗಾರಿಕೆ ಮಾಡುತ್ತಾನೆ. ಪರಿಶುದ್ಧಾತ್ಮನು ನಮಗಾಗಿ ವ್ಯಕ್ತಪಡಿಸುವಿಕೆಯನ್ನು ಮೀರಿ, ತೀವ್ರಗೊಳಿಸುವಿಕೆಯೊಂದಿಗೆ ಪರಾರ್ಥ ವಿಜ್ಞಾಪನೆ ಮಾಡುತ್ತಾನೆ. ಎಂಥಾ ದೇವರು! ಎಂಥಾ ರಕ್ಷಕನು! ಎಂಥಾ ಪರಿಶುದ್ಧಾತ್ಮನು!

## ಕರ್ತೃಸಂಬಂಧವುಳ್ಳ ಅಧಿಕಾರ

ಕ್ರೈಸ್ತತ್ವವು ಕರ್ಮವಾಚಕ ಮತ್ತು ಕರ್ತೃಸಂಬಂಧವುಳ್ಳ ಅಧಿಕಾರಗಳೆರಡನ್ನೂ ಒಳಗೊಂಡಿರುತ್ತದೆ. ಬೈಬಲು ದೇವರ ಕರ್ಮವಾಚಕ ಅಧಿಕರಾವಾಗಿದೆ. "ಕರ್ತನು ಹೀಗೆ ಹೇಳುತ್ತಾನೆ." ನಂಬು ಮತ್ತು ವಿಧೇಯನಾಗು. ಹೀಗಿದ್ದರೂ, ಕರ್ತೃಸಂಬಂಧವಾದದ್ದನ್ನು ಕಡೆಗಣಿಸಲು ನಾವು ಕರ್ಮವಾಚಕವಾದದ್ದನ್ನು ಒತ್ತಿ ಹೇಳುತ್ತೇವೆ. ಬೈಬಲು ನಮ್ಮ ಅಂತಿಮ ಧಾರ್ಮಿಕ ಅಧಿಕಾರವಾಗಿದೆ. ಹೀಗಿದ್ದರೂ, ಅನೇಕ ದೊಡ್ಡ ಬೈಬಲಿನ ತತ್ವಗಳು ಕರ್ತೃಸಂಬಂಧವಾದವುಗಳಾಗಿವೆ. ಜ್ಞಾನವು ಕರ್ತೃಸಂಬಂಧವಾದದ್ದಾಗಿದೆ. ಪರಿಪಾಲನೆಯು ಕರ್ತೃಸಂಬಂಧವಾದದ್ದಾಗಿದೆ. ಮನಸ್ಸಾಕ್ಷಿಯು ಕರ್ತೃಸಂಬಂಧವಾದದ್ದಾಗಿದೆ. ವಿರೋಧಾಭಾಸವಾಗಿ, "ವಿಗ್ರಹಗಳಿಗೆ ಯಜ್ಞಮಾಡಿದ ಮಾಂಸದ" ವಿಷಯದಲ್ಲಿ ಒಬ್ಬ ಕ್ರೈಸ್ತನಿಗೆ ಇನ್ನೊಬ್ಬ ಕ್ರೈಸ್ತನಿಗೆ ಭಿನ್ನತೆಯಿರಬಹುದು. ನಾವು ಕರ್ಮವಾಚಕವಾದದ್ದನ್ನು ಕರ್ತೃ ಸಂಬಂಧವಾದದ್ದರೊಂದಿಗೆ ಗಲಿಬಿಲಿಪಡಿಸಬಾರದು.

ಕರ್ತೃಸಂಬಂಧವಾದ ಅಧಿಕಾರವನ್ನು ಮಾನವ ಅಭಿಪ್ರಾಯ, ಅಪೇಕ್ಷೆ ಇಲ್ಲವೇ ಭಾವನೆಗ ಳೊಂದಿಗೆ ಎಂದಿಗೂ ಗಲಿಬಿಲಿಗೊಳಿಸಬಾರದು. ಕರ್ತೃಸಂಬಂಧವಾದ ಅಧಿಕಾರವು ಒಂದು ಅಧಿಕಾರವಾಗಿರುವುದು (ರೋಮಾಪುರ 14:23). ಕರ್ತೃಸಂಬಂಧವಾದ ಅಧಿಕಾರವು ನಮ್ಮ ಸ್ವಾರ್ಥತೆಯಾಗಿರುವದಿಲ್ಲ. ಪ್ರಭುದ್ಧತೆಯು ಕರ್ತೃಸಂಬಂಧವಾಗಿರುವುದು. ಗುಣಲಕ್ಷಣವು ಕರ್ತೃಸಂಬಂಧವಾಗಿರುವುದು. ಲೌಕಿಕತೆಯು ನಿಷೇದಾರ್ಥಕ ಕರ್ತೃಸಂಬಂಧವಾಗಿರುವುದು.

ಕರ್ತೃಸಂಬಂಧವಾಗಿರುವಲ್ಲಿ, ಪ್ರಾರ್ಥನೆಯನ್ನು ಸಿದ್ಧಮಾಡಿ ತೋರಿ ಸಲಿಕ್ಕಾಗುವದಿಲ್ಲ. ಜ್ಞಾನವು ಸಿದ್ಧಮಾಡಿ ತೋರಿಸಲ್ಪಡಲಿಕ್ಕಾಗುವದಿಲ್ಲ. ಮೋಸ ಹೋದ ಜನರಿಂದ ಘೋರವಾದ ಹೇಳಿಕೆಗಳ ಬಗ್ಗೆ ಎಚ್ಚರಿಕೆಯಿಂದ ಇರಿ. ಕರ್ತೃ ಸಂಬಂಧದೊಂದಿಗೆ ಎಚ್ಚರಿಕೆಯಿಂದ ಇರಿ. ಮಾರ್ಗದರ್ಶನವು ಕರ್ತೃಸಂಬಂಧವಾ ಗಿದೆ. ನಮಗಾಗಿ ಬಿಡಿಸಿ ಉತ್ತರಿಸಿದ ಕರಿ ಹಲಿಗೆಯೊಂದಿಗೆ ದೇವರು ಬರುವದಿಲ್ಲ. ಬೈಬಲು ನಮಗೆ ನಿತ್ಯವಾದ ತತ್ವಗಳನ್ನು ಬೋಧಿಸುತ್ತದೆ. ಗುಣಲಕ್ಷಣವು ಉನ್ನತ ವಾದ ನೈತಿಕತೆಯನ್ನು ನಮ್ಮೊಳಗೆ ತುಂಬಿಸುತ್ತದೆ ... ಆಗ ನಿರ್ದಿಷ್ಟತೆಗಳು ನಮ್ಮವಾ ಗಿರುತ್ತವೆ. ದೇವರು ಮಕ್ಕಳನ್ನು ಬಯಸುತ್ತಾನೆ - ರೊಬೊಟುಗಳನ್ನಲ್ಲ, ದೇವರು ಪ್ರಬುದ್ಧರನ್ನು ಬಯಸುತ್ತಾನೆ - ಶಿಶುಗಳನ್ನಲ್ಲ. "ಸಂಗ್ರಹ" ಸಮಸ್ಯೆಗಳಿಗಾಗಿ "ತಟ್ಟುವ" ಉತ್ತರಗಳೊಂದಿಗೆ ಸರಳ ನಿಯಮ ಪುಸ್ತಕವಿರುವದಿಲ್ಲ. ನಾವು ಜಾವಾಬ್ದಾರಿಕೆಯುಳ್ಳವ ರಾಗಬೇಕೆಂದು ದೇವರು ಬಯಸುತ್ತಾನೆ. ನಾವು ಪ್ರಬುದ್ಧರಾಗಲು ದೇವರು ಬಯಸುತ್ತಾನೆ: ಹೇಗೆ ಜೀವಿಸಬೇ ಕೆಂದು ದೇವರು ನಮಗೆ ಹೇಳುತ್ತಾನೆ - ಆದರೆ ಆತನು ನಿರ್ದಿಷ್ಟವಾದ ಕೆಲಸವನ್ನು ನೇಮಿಸುವದಿಲ್ಲ. ಕ್ರೈಸ್ತನಿಗೆ ಯಾವ ರೀತಿಯ ಜೊತೆಗಾತಿಯ ಅಗತ್ಯತೆಯಿದೆ ಎಂದು ದೇವರು ನಮಗೆ ಹೇಳುತ್ತಾನೆ, ಆದರೆ ಯಾವ ಹೆಸರನ್ನು ಒದಗಿಸುವದಿಲ್ಲ. ದೇವರ ಮನಸ್ಸು ಮತ್ತು ಚಿತ್ತವಿರಲು ನಾವು ಬೈಬಲನ್ನು ಅಧ್ಯಯನ ಮಾಡುತ್ತೇವೆ. ಅವುಗ ಳನ್ನು ಅನ್ವಯಿಸುವದಕ್ಕೆ ಬುದ್ಧಿವಂತಿಕೆಗಾಗಿ ನಾವು ಪ್ರಾರ್ಥಿಸುತ್ತೇವೆ. ಪ್ರಾರ್ಥನೆಯಲ್ಲಿ ಪರಿಶುದ್ಧಾತ್ಮನು ಒಳಗೊಳಿಸುವದರಲ್ಲಿ ಯಾವುದೂ ಅದ್ವಿತೀಯವಾದದ್ದೂ ಇಲ್ಲವೇ ಗಲಿಬಿಲಿಪಡಿಸುವಂಥದ್ದೂ ಇರುವದಿಲ್ಲ.

ನಾವು ದೇವರನ್ನು ಆತ್ಮನಲ್ಲಿ ಆರಾಧಿಸುತ್ತೇವೆ (ಯೋಹಾನ 4:23, 24). ಮನಷ್ಯನ ಅತಿ ದೊಡ್ಡ ಎತ್ತರವು ತನ್ನ ಮೊಣಕಾಲುಗಳಿಂದ ಆಕಾಶವನ್ನು ತಲುಪುವುದಾಗಿದೆ. ಆರಾಧನೆಯು ಆತ್ಮನಿಂದ ತುಂಬಿಸಲ್ಪಟ್ಟ ಕ್ರೈಸ್ತರಿಂದ ಮಾತ್ರ ಬರುತ್ತದೆ (ಎಫೆಸ 5:18). ರೋಮಾಪುರ 8ನೆಯ ಅಧ್ಯಾಯವು ದೇವರ ಸಂಕಲ್ಪದ ಕೃಪೆಯ ಒಂದು ದೊಡ್ಡ ಅಧ್ಯಾಯವಾಗಿದೆ. ಮುಖ್ಯ ನಟನು ಪರಿಶುದ್ಧಾತ್ಮನಾಗಿದ್ದಾನೆ (ಮತ್ತಾಯ 7:11; ಲೂಕ 11:13). ಪರಿಶುದ್ಧಾತ್ಮನು ದೇವರ ಆಶೀರ್ವಾದಗಳನ್ನು ವಿವರಿಸುವ ದೇವರ ನಿಯೋಗ ವಾಗಿದ್ದಾನೆ ಪ್ರಾರ್ಥಿಸಲು ಅದು ಕಠಿಣವಾದದ್ದಾದಾಗ, *ಕಠಿಣವಾದದ್ದನ್ನು ಪ್ರಾರ್ಥಿಸಿರಿ*!

***"ಕರ್ತನೇ, ನಾನು ಪ್ರಾರ್ಥನೆಯಲ್ಲಿ ನಂಬಿಕೆ ಇಡುವದಿಲ್ಲ.***

***ನಾನು ನಿನ್ನಲ್ಲಿ ನಂಬಿಕೆಯಿಡುತ್ತೇನೆ.***

***ನಂಬಿಕೆಯಲ್ಲಿ ಪ್ರಾರ್ಥಿಸುವದನ್ನು ನನಗೆ ಕಲಿಸು."***

© 2009 Truth for Today